**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/155/ಪ್ರಾಂಬಢ್ತಿ/ಬಸ್ಥಾವಿ/2017-18/ಭಾಗ-2 ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:06.01.2018

**ಆದೇಶ**

**ವಿಷಯ :** ಗ್ರೇಡ್-1 ಪ್ರಾಂಶುಪಾಲರುಗಳಿಗೆ ಗ್ರೇಡ್-2 ಪ್ರಾಂಶುಪಾಲರ ಹುದ್ದೆಯಲ್ಲಿ ಸ್ವತಂತ್ರ ಪ್ರಭಾರದಲ್ಲಿರಿಸುವ ಬಗ್ಗೆ.

**ಉಲ್ಲೇಖ :** 1. ಸರ್ಕಾರದ ದಿನಾಂಕ : 06.12.2017ರ ಸಂಖ್ಯೆ : ಇಡಿ-60-ಡಿಸಿಇ-2016ರ ಅಧಿಸೂಚನೆ.
2. ಈ ಕಛೇರಿ ದಿನಾಂಕ : 15.12.2017ರ ಸಮಸಂಖ್ಯೆಯ ಸುತ್ತೋಲೆ.
3. ಸರ್ಕಾರದ ದಿನಾಂಕ : 26.12.2017ರ ಸಂಖ್ಯೆ : ಇಡಿ 60 ಡಿಸಿಇ 2016ರ ಪತ್ರ.

** ** **

ಕಾಲೇಜು ಶಿಕ್ಷಣ ಇಲಾಖೆಯ ಗ್ರೇಡ್-1 ಪ್ರಾಂಶುಪಾಲರುಗಳಿಗೆ ಯು.ಜಿ.ಸಿ. ವೇತನ ಶ್ರೇಣಿ ರೂ.37400-67000+ಎ.ಜಿ.ಪಿ. ರೂ.10000 ರಲ್ಲಿ ಗ್ರೇಡ್-2 ಪ್ರಾಂಶುಪಾಲರ ಹುದ್ದೆಗೆ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958ರ ನಿಯಮ 32(ಬಿ)ರಡಿ ಸ್ವತಂತ್ರ ಪ್ರಭಾರದಲ್ಲಿರಿಸಿ ಉಲ್ಲೇಖ(1)ರಲ್ಲಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಸರ್ಕಾರದ ಅಧಿಸೂಚನೆ ಪ್ರಕಾರ 10 ಗ್ರೇಡ್-1 ಪ್ರಾಂಶುಪಾಲರುಗಳಿಗೆ ಗ್ರೇಡ್-2 ಪ್ರಾಂಶುಪಾಲರ ಹುದ್ದೆಯ ಎದುರಾಗಿ ಸ್ವತಂತ್ರ ಪ್ರಭಾರದಲ್ಲಿ ಸ್ಥಳ ನಿಯುಕ್ತಿಗೊಳಿಸಲು ದಿನಾಂಕ : 21.12.2017 ರಂದು ಕೌನ್ಸಿಲಿಂಗ್ (ಸ್ಥಳ ಆಯ್ಕೆ ಪ್ರಕ್ರಿಯೆ) ಏರ್ಪಡಿಸಲಾಗಿದ್ದು, ಈ ಕೆಳಕಂಡ ಗ್ರೇಡ್-1 ಪ್ರಾಂಶುಪಾಲರು ಕೌನ್ಸಿಲಿಂಗ್‌ನಲ್ಲಿ ಹಾಜರಾಗಿ ಅವರ ಹೆಸರಿನ ಮುಂದೆ ಸೂಚಿಸಿರುವ ಕಾಲಂ (4)ರಂತೆ ಗ್ರೇಡ್-2 ಪ್ರಾಂಶುಪಾಲರ ಕಾಲೇಜಿನ ಸ್ಥಳಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ.

ಉಲ್ಲೇಖ (3)ರ ಸರ್ಕಾರಿ ಪತ್ರದಲ್ಲಿ ಗ್ರೇಡ್-2 ಪ್ರಾಂಶುಪಾಲರ ಕಾಲೇಜುಗಳ ಹುದ್ದೆಗಳಿಗೆ ಕೌನ್ಸಿಲಿಂಗ್ ಮುಖಾಂತರ ಸ್ಥಳನಿಯುಕ್ತಿಗೊಳಿಸುವಂತೆ ಅನುಮತಿ ನೀಡಲಾಗಿರುತ್ತದೆ. ಆದುದರಿಂದ ಈ ಕೆಳಕಂಡ ಗ್ರೇಡ್-2 ಪ್ರಾಂಶುಪಾಲರನ್ನು ಕಾಲಂ (04)ರಲ್ಲಿ ಸೂಚಿಸಿರುವ ಕಾಲೇಜುಗಳಿಗೆ ಕೂಡಲೇ ಜಾರಿಗೆ ಬರುವಂತೆ ಸ್ಥಳನಿಯುಕ್ತಿಗೊಳಿಸಲಾಗಿದೆ.

| ಕ್ರ. ಸಂ. | ಹೆಸರು (ಶ್ರೀಮತಿ/ಶ್ರೀಯುತರು) | ಗ್ರೇಡ್-1 ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿರುವ ಕಾಲೇಜಿನ ಹೆಸರು | ಗ್ರೇಡ್-2 ಪ್ರಾಂಶುಪಾಲರಾಗಿ ಸ್ವತಂತ್ರ ಪ್ರಭಾರದಲ್ಲಿರಿಸಿ ಬಡ್ತಿ ನೀಡಿ ಸ್ಥಳನಿಯುಕ್ತಿಗೊಳಿಸಿರುವ ಕಾಲೇಜಿನ ಹೆಸರು |
|---|---|---|---|
| 01 | 02 | 03 | 04 |
| 1 | ನಾಯಕ್ ಮಾನಸಿಂಗ್ ಕೇಶವ್ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಜಾಜಿನಗರ, ಬೆಂಗಳೂರು. | ಮಹಾರಾಣಿ ಮಹಿಳಾ ಕಲಾ ಹಾಗೂ ವಾಣಿಜ್ಯ ನಿರ್ವಹಣಾ ಕಾಲೇಜು, ಬೆಂಗಳೂರು. |
| 2 | ವೀಣಾ.ಜೆ.ಎಸ್. | ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು. | ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು |

| 01 | 02 | 03 | 04 |
|---|---|---|---|
| 3 | ಮಲ್ಲೇಶ್ವರಪ್ಪ.ಎಸ್. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು | ಸರ್ಕಾರಿ ಕಲಾ ಕಾಲೇಜು, ಬೆಂಗಳೂರು |
| 4 | ಸುಧಾಕರ ಟಿ.ಎಲ್. | ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ | ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ |
| 5 | ನಿಡವಣಿ.ಡಿ.ಎಂ. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನವಲಗುಂದ, ಧಾರವಾಡ. | ಸರ್ಕಾರಿ ಆರ್.ಸಿ. ವಾಣಿಜ್ಯ ಕಾಲೇಜು, ಬೆಂಗಳೂರು |
| 6 | ಡಾ.ನೀಲಾಂಬಿಕ ಎಸ್. ಪಟ್ಟಣಶೆಟ್ಟಿ | ಸರ್ಕಾರಿ ಮಹಿಳಾ ಕಾಲೇಜು, ಧಾರವಾಡ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ಪುರಂ, ಬೆಂಗಳೂರು |
| 7 | ಬಹ್ಮನಪಾಡ್.ಸಿ.ಪಿ. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಧಾರವಾಡ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು |
| 8 | ರಮೇಶ್ ಬಾಬು.ಆರ್.ಕೆ. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಗಡಿ. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಾ |
| 9 | ಉದಯಶಂಕರ್.ಹೆಚ್. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾಣಿಯೂರು | ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು. |
| 10 | ರಾಮಕೃಷ್ಣ ರೆಡ್ಡಿ.ಆರ್. | ಶ್ರೀಮತಿ ವಿ.ಹೆಚ್.ಡಿ. ಗೃಹ ವಿಜ್ಞಾನ ಕಾಲೇಜು, ಬೆಂಗಳೂರು. | ಶ್ರೀಮತಿ ವಿ.ಹೆಚ್.ಡಿ. ಗೃಹ ವಿಜ್ಞಾನ ಕಾಲೇಜು, ಬೆಂಗಳೂರು |

ಮೇಲ್ಕಾಣಿಸಿದ ಗ್ರೇಡ್-1 ಪ್ರಾಂಶುಪಾಲರುಗಳು ಅವರುಗಳ ಹೆಸರಿನ ಮುಂದೆ ಸೂಚಿಸಲಾದ ಕಾಲೇಜುಗಳಿಗೆ ಕೂಡಲೇ ಕಾರ್ಯವರದಿ ಮಾಡಿಕೊಂಡು ಇದಕ್ಕೆ ಸಂಬಂಧಪಟ್ಟಂತೆ ಸಿ.ಟಿ.ಸಿ.ಯನ್ನು ಕಳುಹಿಸಿಕೊಡುವಂತೆ ಸೂಚಿಸಲಾಗಿದೆ.

ಇವರುಗಳ ಹೆಸರಿನ ಮುಂದೆ ಸೂಚಿಸಲಾಗಿರುವ ಕಾಲೇಜುಗಳಲ್ಲಿ 15 ದಿನಗಳ ಒಳಗೆ ಕಾರ್ಯ ವರದಿ ಮಾಡಿಕೊಳ್ಳದೇ ಇದ್ದಲ್ಲಿ ಇವರುಗಳಿಗೆ ಪ್ರಭಾರದಲ್ಲಿರಿಸಿ ನೀಡಲಾಗಿರುವ ಗ್ರೇಡ್-2 ಪ್ರಾಂಶುಪಾಲರ ಮುಂಬಡ್ತಿಯು ತಾನೇ ತಾನಾಗಿ ರದ್ದುಗೊಂಡಂತಾಗುತ್ತದೆ.

***(ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)***

Shilpa

**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು**

**ಇವರಿಗೆ :**

1. ಸಂಬಂಧಪಟ್ಟ ಕಾಲೇಜುಗಳ ಗ್ರೇಡ್-1 ಪ್ರಾಂಶುಪಾಲರುಗಳಿಗೆ – ಮೇಲ್ಕಾಣಿಸಿದ ಆದೇಶದಲ್ಲಿ ಗ್ರೇಡ್-2 ಪ್ರಾಂಶುಪಾಲರಾಗಿ ಬಡ್ತಿ ಹೊಂದಿರುವ ಗ್ರೇಡ್-1 ಪ್ರಾಂಶುಪಾಲರುಗಳು ಕೂಡಲೇ ಕರ್ತವ್ಯದಿಂದ ಬಿಡುಗಡೆ ಹೊಂದುವಂತೆ ಹಾಗೂ ತಮ್ಮ ಕಾಲೇಜಿನಲ್ಲಿ ಸೇವಾ ಜ್ಯೇಷ್ಠತೆಯಲ್ಲಿ ಹಿರಿಯರಾದ ಉಪನ್ಯಾಸಕರಿಗೆ ಪ್ರಭಾರವನ್ನು ವಹಿಸಿ ಸೇವಾ ಮುಕ್ತರಾಗುವಂತೆ ಸೂಚಿಸಲಾಗಿದೆ.
2. ಮೇಲ್ಕಂಡ ಎಲ್ಲಾ ಗ್ರೇಡ್-2 ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಮಾಹಿತಿಗಾಗಿ.
4. ಕಾಲೇಜು ಶಿಕ್ಷಣ ಇಲಾಖೆಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು – ಮಾಹಿತಿಗಾಗಿ.

**ಪ್ರತಿ ರವಾನೆ ಆಂತರಿಕ :**

1. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಮೇಲ್ಕಂಡ ಆದೇಶವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಂಬಂಧ ಅಗತ್ಯ ಕ್ರಮಕ್ಕಾಗಿ.
2. ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳು ಹಾಗೂ ಅವರ ಆಪ್ತ ಸಹಾಯಕರುಗಳಿಗೆ - ಮಾಹಿತಿಗಾಗಿ.
3. ಮ್ಯಾನೇಜರ್/ಅಧೀಕ್ಷಕರು, ಸೇವಾ ವಿಭಾಗ-1, ವರ್ಗಾವಣೆ & ನಿಯೋಜನೆ, ಹಣ ಮತ್ತು ಪಾವತಿ ವಿಭಾಗ, ಗೌಪ್ಯ ವರದಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಮಾಹಿತಿ ಹಾಗೂ ಅಗತ್ಯಕ್ರಮಕ್ಕಾಗಿ.